ಆಹಾರವಾಗುತ್ತಿತ್ತು. ಇದನ್ನೆಲ್ಲಾ ಗಮನಿಸಿದ ನಮ್ಮ ಗುಂಪು ಮತ್ತು ಇತರ ಪ್ರಾಣಿ ಪಕ್ಷಿಗಳು ಇವನಿಗೆ 'ಪರಿಸರ ಪ್ರೇಮಿ' ಎಂದೇ ನಾಮಕರಣ ಮಾಡಿದ್ದೆವು ಮತ್ತು ಅವನ ಮೇಲಿದ್ದ ನಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡಿದ್ದೆವು. ಇವೆಲ್ಲಾ ಆಗಿ ಸುಮಾರು ಹದಿನೈದು ವರ್ಷಗಳೇ ಕಳೆದಿರಬಹುದು, ಈಗ ನಮ್ಮ ಗುಂಪಿನಲ್ಲಿದ್ದ ಮತ್ತಿ, ಮದ್ದಾಲೆ, ಹುಣಾಲ, ಸಂಪಿಗೆ, ಬಿದಿರು ಮುಂತಾದವುಗಳು ಮಾನವನ ಆಸೆಗೆ ಬಲಿಯಾಗಿದ್ದವು. ಉಳಿದಿರುವುದು ನಾನು, ಕೊಡಸ, ನೆಲ್ಲಿ ಮತ್ತು ಅಳಲೆ ಅಷ್ಟೆ. ನಮ್ಮ ಜೀವಕ್ಕೂ ದಿನಾಂಕ ನಿಗದಿಯಾಗಿತ್ತು. ಅಂದು ನನ್ನ ಸರದಿ ಎಂದು ನಾನು ಅದಾಗಲೇ ತೀರ್ಮಾನಿಸಿ ಉಳಿದಿರುವ ನನ್ನ ಸ್ನೇಹಿತರ ಬಳಿ ವಿದಾಯದ ಮಾತುಗಳನ್ನಾಡಿಯಾಗಿತ್ತು. ಅಷ್ಟು ಹೊತ್ತಿಗಾಗಲೇ ಉತ್ತರದ ಕಡೆಯಿಂದ ಬಂದ ಆ ಪರಿಸರ ಪ್ರೇಮಿ ಅಲ್ಲಿ ನಡೆದ ಮರಗಳ ಮಾರಣಹೋಮಗಳನ್ನು ನೋಡಿ ಚಿಂತಾಕ್ರಾಂತನಾಗಿದ್ದ. ಅದೇ ಸಮಯಕ್ಕೆ ಸರಿಯಾಗಿ ಪೂರ್ವದಿಂದ ಬಂದ ಐದಾರು ಜನ ದಡೂತಿಗಳು ತಮ್ಮ ಬಳಿಯ ಕತ್ತಿ, ಕೊಡಲಿ, ಗರಗಸ ಮುಂತಾದ ಹತಾರಗಳನ್ನು ತೆಗೆದುಕೊಂಡು ನನ್ನ ಬುಡಕ್ಕೆ ಬಂದರು. ನಾನು ಕಣ್ಮುಚ್ಚಿ ಎದೆಯನ್ನು ಗಟ್ಟಿ ಮಾಡಿಕೊಂಡು ನಿಂತಿದ್ದೆ. ನನ್ನಲ್ಲಿನ ಆಶ್ರಿತರು ವಲಸೆ ಹೋಗುವ ತಯಾರಿಯಲ್ಲಿದ್ದವು. ಹೆಣಕೆಗಳ ತುಂಬಾ ತುಂಬಿದ್ದ ತಿಳಿಹಸಿರ ಮಿಡಿಗಳು ಆಕ್ರಂದಿಸುತ್ತಿದ್ದವು. ಆಗ ನನ್ನ ಬಳಿ ಓಡಿಬಂದ ಆ ಪರಿಸರಪ್ರೇಮಿ ನನ್ನನ್ನು ತಬ್ಬಿ ಹಿಡಿದು ಅದೇನನ್ನೋ ಬಡಬಡಿಸತೊಡಗಿದ. ಆ ಕಟುಕರಿಗೂ ಇವನಿಗೂ ದೊಡ್ಡ ಗಲಾಟೆಯೇ ಆಗಿರಬೇಕು. ನಂತರ ಆ ದಡೂತಿಗಳು ಇವನತ್ತ ಕೈಬೆರಳು ತೋರಿಸುತ್ತಾ ನಿನ್ನನ್ನು ನೋಡ್ಕೊತೀವಿ ಎಂಬ ಭಾವದಲ್ಲಿ ಹೊರಟುಹೋದರು. ಪರಿಸರಪ್ರೇಮಿಯು ಖುಷಿಯಿಂದ ಕುಣಿದಾಡಿದ್ದ. ನನ್ನ ಮನಸ್ಸು ಕೂಡಾ ಅವನಂತೆಯೇ ಆಡುತ್ತಿತ್ತು.

ಇಂದು ಉಳಿದರೂ ನಾಳೆಯ ದಿನಗಳಲ್ಲಿ ಆ ದಡೂತಿಗಳು ನನ್ನನ್ನು ಖಂಡಿತಾ ಉಳಿಸಲಾರರೆಂಬುದು ನನ್ನ ನಂಬಿಕೆಯಾಗಿತ್ತು. ಅಂದು ಅದೆಷ್ಟು ಸಲ ಅತ್ತಿದ್ದೆನೋ ಅದೆಷ್ಟು ಸಲ ದೊಡ್ಡ ನಿಟ್ಟುಸಿರು ಬಿಟ್ಟಿದ್ದೆನೋ ನನಗೆ ನೆನಪಿಲ್ಲ. ಅಂದು ಮಧ್ಯರಾತ್ರಿ ನಾಲ್ಕು ಗಂಟೆಯಾಗಿರಬಹುದು. ಉತ್ತರದ ಕಡೆಯಿಂದ ಇಬ್ಬರು ಅಪರಿಚಿತರು ಬಂದರು. ಅವರು ಕಡುಗಪ್ಪು ಶಿಲೆಯೊಂದನ್ನು ಹೊತ್ತು ತಂದಿದ್ದರು. ಅದರ ಮೇಲೆ ನಾಗರ ಹಾವಿನ ಚಿತ್ರವು ಕೆತ್ತಲ್ಪಟ್ಟಿತ್ತು. ಹಿಂದಿನಿಂದಲೇ ನಮ್ಮ ಪರಿಸರ ಪ್ರೇಮಿಯೂ ಬಂದಿದ್ದ. ಕೈಯಲ್ಲಿ ಹಾರೆ ಹಿಡಿದಿದ್ದ ಅವನು ಲಗುಬಗೆಯಿಂದ ನನ್ನ ಬುಡದಲ್ಲಿ ಅಗೆದು ಆ ಇಬ್ಬರು ಆಳುಗಳ ಸಹಾಯದಿಂದ ನಾಗರನ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಿ, ಕಲ್ಲಿಗೆ ಅರಿಶಿನ ಕುಂಕುಮವನ್ನು ಲೇಪಿಸಿ, ಅಕ್ಕಪಕ್ಕದಲ್ಲಿ ಎರಡು ತ್ರಿಶೂಲಗಳನ್ನು ಊರಿ ಹೊರಟು ಹೋದರು. ಇವನ ಈ ಕೆಲಸ ನನಗೆ ವಿಚಿತ್ರವೆನಿಸಿತ್ತು. ಹೀಗೇ ನಾವುಗಳು ಯೋಚನೆಯಲ್ಲಿರುವಾಗ ಅಪರೂಪದ ಅತಿಥಿಯಾಗಿ ಬಂದ ಕರಿನಾಗನಿಗೆ, ಇಂದು ನಮ್ಮ



ಗುಂಪಿನ ಬಳಿಯೇ ಸುತ್ತಾಡುತ್ತಿರು ಎಂದು ಮನವಿ ಮಾಡಿದ್ದೆವು. ನಮ್ಮ ನಿರೀಕ್ಷೆಯಂತೆ ಆ ದಡೂತಿಗಳು ಇತ್ತ ಬಂದರು. ಇನ್ನೇನು ನನ್ನ ಬುಡಕ್ಕೆ ಕೊಡಲಿ ಹಾಕಬೇಕು ಎನ್ನುವಷ್ಟರಲ್ಲಿ ಕಂಡ ಆ ನಾಗನ ವಿಗ್ರಹವನ್ನು ನೋಡಿ ಹೆದರಿ ಹಿಂದೆ ಸರಿದರು. ಅದರಲ್ಲಿದ್ದ ಒಬ್ಬ ಕರೀ ದಡೂತಿಯವ (ನಾಸ್ತಿಕನಿರಬೇಕು), 'ಏ ಇದೆಲ್ಲಾ ನಿನ್ನೆ ನಮ್ಮನ್ನು ತಡೆದನಲ್ಲ ಅವನ ಕೆಲಸ... ನೀವ್ಯಾರೂ ಹೆದರುವ ಅವಶ್ಯಕತೆಯಿಲ್ಲ. ಈ ಕಲ್ಲನ್ನು ಇಲ್ಲಿಂದ ಕಿತ್ತೆಸೆದು ನಮ್ಮ ಕೆಲಸ ಮುಗಿಸುವ' ಎಂದ. ನನ್ನ ಬಳಿ ಇದ್ದ ವಿಗ್ರಹವನ್ನು ಕಿತ್ತೆಸೆಯಲು ಎರಡು ಜನ ಮುಂದೆ ಬಂದರು. ಅದೇ ಸಮಯಕ್ಕೇ ಹಿಂದಿನ ತೊರೆಯ ಬದಿಯಿಂದ ಬಂದ ಅಪರೂಪದ ಅತಿಥಿ ಕರಿನಾಗ ನನ್ನತ್ತ ಧಾವಿಸಿತು. ನನ್ನ ಜೀವ ಉಳಿಸಿದ ಆಪತ್ಬಾಂಧವ ನಾಗಣ್ಣನಿಗೆ ಕೃತಜ್ಞತೆಗಳನ್ನು ಅರ್ಪಿಸಿ ಕಳಿಸಿಕೊಟ್ಟೆ.

ಪರಿಸರಪ್ರೇಮಿಗೂ ಮನದಲ್ಲೇ ಸಾವಿರ ಕೃತಜ್ಞತೆಗಳನ್ನು ಅರ್ಪಿಸಿದ್ದೆ. ಅಷ್ಟೆ, ಅಂದಿನಿಂದ ಇಲ್ಲಿಯವರೆಗೆ ನನ್ನ ಸುತ್ತಮುತ್ತಲಿನ ಅದೆಷ್ಟು ಮರಗಳು ನಾಶವಾದರೂ ನಾನೊಬ್ಬ ಇಲ್ಲಿ ಗರುಡಗಂಬದಂತೆ ನಿಂತಿದ್ದೇನೆ. ಎಲ್ಲಾ ನಾಗರಕಲ್ಲಿನ ಮಹಿಮೆಯೆಂದು ನನಗೆ ಈಗ ತಿಳಿಯುತ್ತಿದೆ.

ಈ ಎಲ್ಲಾ ಘಟನೆಗಳಾಗಿ ಸುಮಾರು ಮೂರು ನಾಲ್ಕು ವರ್ಷಗಳು ಕಳೆದಿರಬೇಕು, ಪರಿಸರ ಪ್ರೇಮಿಯ ಆಗಮನಕ್ಕಾಗಿ ನಾನು ಪರಿತಪಿಸುತ್ತಿದ್ದ ದಿನಗಳವು. ಹೀಗಿರುವಾಗ ಒಂದು ಬಿರುಬೇಸಿಗೆಯ ಮಧ್ಯಾಹ್ನ ಪರಿಸರಪ್ರೇಮಿ ನನ್ನ ಬಳಿ ಬಂದ, ನಾಗರ ಕಲ್ಲಿಗೆ ನಮಸ್ಕರಿಸಿದ, ನನ್ನ ಮೈಸವರಿದ, ನಾನು ಉದುರಿಸಿದ ತಾಜಾ ಹಣ್ಣುಗಳನ್ನು ತಿಂದ. ಸ್ವಲ್ಪಹೊತ್ತು ಅದೇನೋ ಹಾಡುತ್ತಿದ್ದ... ಅದರ ಸಾಲು ಹೀಗಿತ್ತು (ಸರಿಯಾಗಿ ನೆನಪಿಲ್ಲ).

ನಶಿಸುತಿದೆ ಕಾನನ ಎದ್ದೇಳು ಮಾನವ, ಅಳುತಲಿದೆ ಕಾನನ... ನಂತರ ತನ್ನ ಚೀಲದಿಂದ ಹಗ್ಗ ಒಂದನ್ನು ತೆಗೆದು ನನ್ನ ಬಲಿಷ್ಠವಾದ ಕೊಂಬೆಗೆ ಹಾಕಿದ, ಕೆಳಗೆ ಕುಣಿಕೆಯಾಕಾರ ಮಾಡಿದ. ನಾನು ದಡ್ಡ, ಅವನು ಜೋಕಾಲಿ ಕಟ್ಟಲು ಹೀಗೆ ಮಾಡುತ್ತಿದ್ದಾನೆಂದುಕೊಂಡೆ, ಆದರೆ ಅವನು ನೇಣುಕುಣಿಕೆ ಹೊಸೆಯುತ್ತಿದ್ದಾನೆಂದು ಆನಂತರ ತಿಳಿಯಿತು. ಒಮ್ಮೆ ಭೂದೇವಿಗೆ, ಇನ್ನೊಮ್ಮೆ ಗಗನಕ್ಕೆ ನಮಸ್ಕರಿಸಿ ಆ ಕುಣಿಕೆಯೊಳಗೆ ತಲೆಯಿಟ್ಟುಬಿಟ್ಟ! ನಾನು ಬೇಡವೆಂದು ಬಡಿದುಕೊಂಡೆ, ಕೊಂಬೆಯನ್ನು ಮುರಿದು ಬೀಳುವಂತೆ ಜೋರಾಗಿ ಅಲ್ಲಾಡಿಸಿದೆ, ವಾಯುವಿನಲ್ಲಿ ನನ್ನ ಈ ಹೆಣಕೆಯನ್ನು ತುಂಡರಿಸುವಂತೆ ಬೇಡಿಕೊಂಡೆ. ಊಹೂಂ... ಇದ್ಯಾವುದೂ ಪ್ರಯೋಜನವಾಗಲಿಲ್ಲ. ನನ್ನ ಪ್ರಾಣ ಉಳಿಸಿದ ನಾ ಕಂಡ ಏಕೈಕ ಶ್ರೇಷ್ಠ ಮಾನವನ ಜೀವ ನನ್ನಿಂದಲೇ ತೆಗೆಯಲ್ಪಟ್ಟಿತ್ತು. ಅವನ ಸಾವಿಗೆ ಕಾರಣ ಏನೆಂಬುದು ಇಂದಿಗೂ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಆದರೆ ಅವನ ನೆನಪು ಮಾತ್ರ ಸದಾ ನನ್ನಲ್ಲಿ ಹಸಿರಾಗಿದೆ.

ಇದೆಲ್ಲಾ ಘಟಿಸಿ ಇಂದಿಗೆ ಸುಮಾರು ವರ್ಷಗಳಾಗಿರಬಹುದು. ಈಗ ನನ್ನ ಎದುರಲ್ಲಿ ಡಾಂಬರಿನ ವಿಶಾಲವಾದ ರಸ್ತೆ ಮೈತಾಳಿದೆ. ಬಲಪಕ್ಕದಲ್ಲಿ ಬಸ್ಸಿನ ತಂಗುದಾಣವು ದಾರಿಹೋಕರಿಗೆ ತಂಪೆರೆಯುತ್ತಿದೆ! ನನ್ನ ಬುಡದ ನಾಗರ ಕಲ್ಲಿಗೆ ಜನರೆಲ್ಲಾ ಸೇರಿ ಕಾಂಕ್ರೀಟಿನ ಗುಡಿ ಕಟ್ಟಿಸಿದ್ದಾರೆ. ನಾಗಪಂಚಮಿಯಂದು ಇಲ್ಲಿ ಜನವೋ ಜನ, ನಾಗಣ್ಣನಿಗೆ ಹಾಲೆರೆಯುವುದೇನು, ಆರತಿ, ನೈವೇದ್ಯಗಳೇನು? ಹೂಂ, ಇದನೆಲ್ಲಾ ನೋಡಿ ನನಗೆ ನಗಬೇಕೋ ಅಳಬೇಕೋ ತೋಚುವುದಿಲ್ಲ. ಆದರೆ ಈ ಹಬ್ಬದ ಸಮಯದಲ್ಲಿ ನನ್ನ ಹೆಣಕೆಯಲ್ಲಿ ಹಣ್ಣುಗಳಿರುವುದಿಲ್ಲ, ಆದ ಕಾರಣ ನನ್ನೆಡೆಗೆ ಯಾರೂ ಕಲ್ಲನ್ನಾಗಲಿ ಕೋಲನ್ನಾಗಲಿ ಎಸೆಯುವುದಿಲ್ಲ.

ಬಹಳ ವರ್ಷಗಳ ಸ್ನೇಹಿತನಾದ ನೆಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಗೆ ಧರೆಗುರುಳಿದ. ಈಗ ನನ್ನ ಸುತ್ತಮುತ್ತ ತುಂಬಿಹೋಗಿರುವ ನೀಲಗಿರಿ, ಅಕೇಶಿಯಾ ಮರಗಳ ಜಂಬವನ್ನು ಅಡಗಿಸುತ್ತಿದ್ದ ನೆಲ್ಲಿ ಇಲ್ಲದೆ ಒಂಟಿತನ ಇನ್ನಿಲ್ಲದಂತೆ ಕಾಡತೊಡಗಿದೆ. ನೀಲಗಿರಿ ಎಲೆಗಳ ಹಾಸಿನ ಪ್ರಭಾವಕ್ಕೆ ನನ್ನ ಯಾವೊಂದು ಹಣ್ಣಿಗೂ ಮಣ್ಣಿನೊಳು ಬೆರೆತು ಗಿಡವಾಗುವ ಅವಕಾಶಗಳೇ ಸಿಕ್ಕಿಲ್ಲ. ಇತ್ತೀಚೆಗೆ ಸರಿಯಾಗಿ ಮಳೆ ಕೂಡಾ ಆಗುತ್ತಿಲ್ಲದ ಕಾರಣ, ನನ್ನಲ್ಲಿ ಮುಂಚಿನ ಶಕ್ತಿ ಇಲ್ಲವಾಗಿದೆ. ಮಾತಾಡಲು ಯಾರೂ ಇಲ್ಲದೆ, ಟೊಂಗೆಗಳಲ್ಲಿ ಹಣ್ಣುಗಳಿಲ್ಲದೆ, ಪೊಟರೆಗಳಲ್ಲಿ ಪ್ರಾಣಿಗಳಿಲ್ಲದೆ, ಚಿಲಿಪಿಲಿ ಹಕ್ಕಿಗಳಿಲ್ಲದೆ, ಪಾಚಿ, ಬಂದಳಿಕೆ, ಅಣಬೆಗಳಿಲ್ಲದೆ ನನಗೆ ತುಂಬಾ ಬೇಸರವಾಗುತ್ತಿದೆ. ಹೀಗೆ ಬೋಳಾಗಿ ಬದುಕುವುದಕ್ಕಿಂತ ಮುಂದೆ ಬರುವ ದೊಡ್ಡ ಮಳೆಯಲ್ಲಿ ಬಿದ್ದುಬಿಡುವುದೇ ಲೇಸೆನಿಸುತ್ತಿದೆ.

ಆದರೆ ಮಾನವರೇ ಹೆದರಬೇಡಿ... ನಾನು ನಿಮ್ಮ ನಾಗನ ಬನದ ಮೇಲೆ ಬೀಳುವುದಿಲ್ಲ, ನಿಮ್ಮ ರಸ್ತೆಯ ಮೇಲೆ ಬೀಳುವುದಿಲ್ಲ, ಬಸ್ ತಂಗುದಾಣದ ಮೇಲೆಯೂ ಬೀಳುವುದಿಲ್ಲ. ಬದಲಿಗೆ ಎಡಪಕ್ಕದ ಖಾಲೀ ಜಾಗದಲ್ಲಿ ಬೀಳುತ್ತೇನೆ. ನಾನು ಬಿದ್ದ ತಕ್ಷಣ ನನ್ನೊಡಲಿಗೆ ನೀವು ಕೊಡಲಿ ಹಾಕಿ ನನ್ನನ್ನು ಬೇಕಾದುದಕ್ಕೆ ಬಳಸಿಕೊಳ್ಳಲೂ ನನ್ನ ಸಂಪೂರ್ಣ ಅನುಮತಿಯಿದೆ. ಆದರೆ ನನ್ನ ಕಳೇಬರದ ಜಾಗದಲ್ಲಿ ಒಂದು ಸಸಿ ನೆಡುವುದನ್ನು ಮಾತ್ರ ಮರೆಯಬೇಡಿ, ಯಾಕೆಂದರೆ ನಿಮಗೆ ಕಡಿಯಲು ಮುಂದೆ ಮರಗಳು ಬೇಕಲ್ಲಾ...

ನಮಸ್ಕಾರ.

ಇಂತೀ, ನಿಮ್ಮವ, ಜಂಬೂನೇರಳೆ ಮರ

ಪ್ರತಿಕ್ರಿಯಿಸಿ: feedback@sudha.co.in